ಕೊಳ್ಳುತ್ತೇನೆ. ಎರಡನೆಯದಾಗಿ ಸುಳ್ಯ ಮತ್ತು ಮಂಗಳೂರು ತಾಲ್ಲೂಕುಗಳ ವಿವರ ಬಂದಿಲ್ಲ. ಅದಕ್ಕೊಸ್ಕರ ಕೊಟ್ಟಿಲ್ಲ.

(ಗೊಂದಲ)

ಶ್ರೀ ಪಟಮಕ್ಕಿ ರತ್ನಾಕರ್.—ಸದರಿ ಸಮಿತಿ ಎಲ್ಲಿದೆ ? ಅದಕ್ಕೆ ಯಾವ್ಯಾವ ಸದಸ್ಯರು ಆದರ ಸದಸ್ಯರು ಎಂಬ ಎಲ್ಲ ವಿವರ ಕೊಡಬೇಕು.

(ಗೊಂದಲ)

ಅಧ್ಯಕ್ಷರು.—ನಾನು ಅವಕಾಶ ಕೊಡುವುದಿಲ್ಲ ತಾವು ಡಿಸ್ಟರ್ಬ್ ಮಾಡುವುದಾದರೆ ಮಾಡಿ. ಮುಂದಿನ ಪ್ರಶ್ನೆಯನ್ನು ಕರೆದಿದ್ದೇನೆ ಸಚಿವರ ಉತ್ತರ ಹೇಳುತ್ತಾರೆ. ಈಗ ನೀವು ಹೇಳಿದ್ದು ರೆಕಾರ್ಡಿಗ್ ಹೋಗುವುದಿಲ್ಲ. ಬೇಕಾದರೆ ಅರ್ಧ ಗಂಟೆ ಚರ್ಚೆಗೆ ನೋಟೀಸ್ ಕೊಡಿ ನಾಳೆಯೇ ಇದನ್ನು ಸೇರಿಸುತ್ತೇನೆ.

ವ್ಯವಸಾಯ ಉತ್ಪನ್ನಗಳಿಗೆ ನ್ಯಾಯಬೆಲೆ ಕೊಡುವುದು

೪೫೯. ಶ್ರೀ ಆರ್. ಮೊಕಟರಾಮಯ್ಯ (ಮುಳಬಾಗಿಲು) ಮಾನ್ಯ ವ್ಯವಸಾಯ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವ್ಯವಸಾಯ ಉತ್ಪನ್ನಗಳಾದ ಹತ್ತಿ, ಶೇಂಗಾ, ಭತ್ತ, ರಾಗಿ, ಜೋಳ, ತೊಗರಿ, ಕಬ್ಬು ಮತ್ತು ಇತರೆ ಮಾನ್ಯ ವಸ್ತುಗಳಿಗೆ ನ್ಯಾಯ ಬೆಲೆ ಕೊಡುವುದು ಸರಿಯಲ್ಲವೆ ?

ಆ) ಸಂಕ್ರೀಕೊಪ್ಪ ಕಮಿಟಿಯವರ ವರದಿಯ ಪ್ರಕಾರ ಈ ಬೆಳೆಗಳಿಗೆ ನಿಗಧಿಪಡಿಸಿರುವ ನ್ಯಾಯ ಬೆಲೆ ಎಷ್ಟು ?

ಇ) ಆ ಸಮಿತಿಯ ವರದಿಯನ್ನು ಅನುಷ್ಟಾನಕ್ಕೆ ತರಲು ಸರ್ಕಾರ ಒಪ್ಪುವುದೇ ?

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಸಚಿವರು).—

ಅ) ಹೌದು.

ಆ) ೧೯೮೮-೮೯ನೇ ಸಾಲಿಗೆ ಸಂಕ್ರೀಕೊಪ್ಪ ಕಮಿಟಿಯವರು ಶಿಫಾರಸ್ಸು ಮಾಡಿರುವ ಬೆಂಬಲ ಬೆಲೆಯು ಕೆಳಕಂಡಂತಿದೆ.—

ಬೆಳೆಗಳು	ಶಿಫಾರಸ್ಸು ಮಾಡಿದ ಬೆಂಬಲ ಬೆಲೆ ರೂ. ಕ್ವಿಂಟಾಲಿಗೆ
೧ ಹತ್ತಿ-ಹೈಬ್ರಿಡ್	೯೭೧-೦೦
೨ ಶೇಂಗಾ	೬೨೫-೦೦
೩ ಭತ್ತ (ದಪ್ಪದು)	೨೫೫-೦೦
೪ ರಾಗಿ	೨೯೭-೦೦
೫ ಜೋಳ	೨೦೮-೦೦
೬ ತೊಗರಿ	೫೦೮-೦೦
೭ ಸಜ್ಜೆ	೩೧೬-೦೦
೮ ಮುಸುಕಿನ ಜೋಳ	೨೨೮-೦೦
೯ ಹೆಸರು	೪೪೮-೦೦
೧೦ ಉದ್ದು	೬೨೦-೦೦
೧೧ ಸೋಯಾ ಅವರೆ	೫೬೬-೦೦
೧೨ ಸೂರ್ಯಕಾಂತಿ	೬೨೪-೦೦
೧೩ ತಂಬಾಕು-ಬಿಎಫ್‌ಸಿ	೧೫೨೫-೦೦

ಇ) ರಾಜ್ಯ ಸರ್ಕಾರವು ಕೃಷಿ ಇಲಾಖೆ, ಮತ್ತು ಸಂಕ್ರೀಕೊಪ್ಪ ಸಮಿತಿಯವರು ಸಲ್ಲಿಸುವ ವರದಿಗಳ ಆಧಾರದ ಮೇಲೆ ಕೇಂದ್ರ ಸರ್ಕಾರಕ್ಕೆ ಬೆಂಬಲ ಬೆಲೆಗಳನ್ನು ನಿರ್ಧರಿಸಲು ಶಿಫಾರಸ್ಸು ಮಾಡಿರುತ್ತಾರೆ. ಬೆಂಬಲ ಬೆಲೆಗಳನ್ನು ಕೇಂದ್ರ ಸರ್ಕಾರವು ನಿಗಧಿಪಡಿಸುತ್ತದೆಯೇ ಹೊರತು ರಾಜ್ಯ ಸರ್ಕಾರದ ಕಾರ್ಯವ್ಯಾಪ್ತಿಗೆ ಒಳಪಡುವುದಿಲ್ಲ.

ಶ್ರೀ ಆರ್. ವೆಂಕಟರಾವಯ್ಯ.—ನಮಗೆ ಸ್ವಾತಂತ್ರ್ಯ ಬಂದು ಳಿಸಿ ವರ್ಷಗಳಾದರೂ ಕೃಷಿಕರ ಬೆಳೆಗೆ ಬೆಂಬಲ ಬೆಲೆಯನ್ನು ನಿಗಧಿ ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಯಾವಾಗ ಹೇಳಿದರೂ ಕೇಂದ್ರವನ್ನು ತೋರಿಸುತ್ತಾರೆ, ಅವರನ್ನು ಕೇಳಿದರೆ ರಾಜ್ಯವನ್ನು ತೋರಿಸುತ್ತಾರೆ. ಒಟ್ಟಿನಲ್ಲಿ ರೈತರ ಬೆಳೆಗೆ ಬೆಂಬಲ ಬೆಲೆ ಸಿಕ್ಕಿಲ್ಲ. ಕೇರಳದಲ್ಲಿ ಕೊಬ್ಬರಿಗೆ ಬಂಗಾಳದಲ್ಲಿ ಸೆಣಬಿಗೆ ಬೆಂಬಲ ಬೆಲೆಯನ್ನು ನಿಗಧಿ ಮಾಡಿದ್ದಾರೆ ಅದೇ ರೀತಿಯಾಗಿ ತಾವೂ ಕೂಡ ಇಲ್ಲಿನ ರೈತರು ಬೆಳೆದಂತಹ ಬೆಳೆಗೆ ಬೆಂಬಲ ಬೆಲೆಯನ್ನು ನಿಗಧಿ ಮಾಡುತ್ತೀರಾ ? ನಮ್ಮ ದೇಶದಲ್ಲಿ ಶೇಕಡ ೮೦ರಷ್ಟು ಇರುವ ರೈತರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಬೆಳೆಗಳಿಗೆ ಬೆಂಬಲ ಬೆಲೆ ಕೊಡುವ ಘೋಷಣೆಯನ್ನು ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ನಿಗದಿತ ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟವಾಗುತ್ತಿದ್ದರೆ ಅವುಗಳಿಗೆ ಬೆಂಬಲವ ಬೆಲೆಯನ್ನು ಕೊಡಬೇಕೆಂಬ ಬಗ್ಗೆ ಈಗಾಗಲೇ ಘೋಷಣೆಯನ್ನು ಮಾಡಿದ್ದೇವೆ, ಉದಾಹರಣೆಗೆ ಹೇಳುವುದಾದರೆ ಸಂಕ್ರಿಕೊಪ್ಪ ಕಮಿಟಿಯವರು ಒಂದು ಬೆಲೆಯನ್ನು ನಿಗದಿ ಮಾಡಿದ್ದಾರೆ ಅವರೂ ಕೂಡ ಕಮಿಟಿಯಲ್ಲಿದ್ದಾರೆ. ಕೇಂದ್ರ ಸರ್ಕಾರದವರು ಮಾಡಿದಂತಹ ಸಮಿತಿಯಲ್ಲಿ ಕೆಲವರು ಸದಸ್ಯರಿದ್ದಾರೆ. ಅದರ ತೀರ್ಮಾನ ಪ್ರಕಾರ ದಪ್ಪ ಅಕ್ಕಿಗೆ ೧೬೦ ರೂಪಾಯಿ ಸಣ್ಣ ಅಕ್ಕಿಗೆ ೧೭೦ ರೂಪಾಯಿ ಅತಿ ಸಣ್ಣ ಅಕ್ಕಿಗೆ ೧೮೦ ರೂಪಾಯಿ ಎಂದು ನಿಗದಿ ಮಾಡಿದ್ದಾರೆ. ಜೋಳಕ್ಕೆ ೧೪೫ ರೂಪಾಯಿ, ಮುಸುಕಿನ ಜೋಳ ೧೪೫ ರೂಪಾಯಿ, ರಾಗಿ ೧೪೫ ರೂಪಾಯಿ ಎಂದು ನಿಗದಿ ಮಾಡಿದ್ದಾರೆ ಹೆಸರಿಗೆ ೩೮೦ ರೂ, ಉದ್ದು ೩೬೦. ಶೇಂಗಾ ೪೩೦ ರೂ, ಸೋಯಾ ಅವರೆ ಕಪ್ಪು ೨೭೫, ಹಳದಿಗೆ ೩೨೦ ರೂ, ಸೂರ್ಯಕಾಂತಿ ೪೫೦ ರೂ, ಹತ್ತಿ ಹೈಬ್ರೀಡ್ ೬೦೦ ಇತರ ೫೦೦, ಕಬ್ಬು ೧೯೦ ರೂ. ಒಂದು ಟನ್ನಿಗೆ, ಇದು ಈಗ ಅವರು ಗೊತ್ತು ಮಾಡಿರುವ ಬೆಲೆ. ನಾವು ಕರ್ನಾಟಕ ಸರ್ಕಾರದ ವತಿಯಿಂದ ಅಂದರೆ ಫಾರ್ಮರ್ಸ್ ಸ್ಟೇಟ್ ಕೋ-ಆಪರೇಟಿವ್ ಫೆಡರೇಷನ್ ಮುಖಾಂತರ ಭತ್ತವನ್ನು ೫೦೯೦ ಕ್ವಿಂಟಾಲ್‌ನ್ನು ಕ್ವಿಂಟಾಲ್‌ಗೆ ೨೪೦ ರಿಂದ ೨೬೦ ರೂಪಾಯಿಂವರೆಗೆ ಕೊಟ್ಟು ಕೊಂಡಿದ್ದೇವೆ, ೧೫ ಸಾವಿರ ಕ್ವಿಂಟಾಲ್ ತೊಗರಿಯನ್ನು ಕ್ವಿಂಟಾಲ್‌ಗೆ ೫೮೫ರಂತೆ ಕೊಂಡಿದ್ದೇವೆ. ೫೯೦೫ ಕ್ವಿಂಟಾಲ್‌ನಷ್ಟು ಮೈಜ್‌ನ್ನು ಕ್ವಿಂಟಾಲ್ ಒಂದಕ್ಕೆ ೧೯೦ ರಿಂದ ೧೯೮ ರೂಪಾಯಿವರೆಗೆ ಕೊಟ್ಟು ಕೊಂಡಿದ್ದೇವೆ. ಸಾಲ್ಮು ಸಾವಿರ ಟನ್‌ನಷ್ಟು ರಾಗಿಯನ್ನು ಕ್ವಿಂಟಾಲ್ ಒಂದಕ್ಕೆ ೧೪೦ ರೂಪಾಯಿನಂತೆ ಕೊಟ್ಟುಕೊಂಡಿದ್ದೇವೆ. ೨೦,೦೬೧ ಕ್ವಿಂಟಾಲ್‌ನಷ್ಟು ಹತ್ತಿಯನ್ನು ಒಂದು ಕ್ವಿಂಟಾಲ್‌ಗೆ ೧೨೫೦ ರೂಪಾಯಿಯಿಂದ ೧೪೫೦ ರೂಪಾಯಿಗಳವರೆಗೆ ಕೊಟ್ಟು ಕೊಂಡಿದ್ದೇವೆ. ಮತ್ತೆ ಫಾರ್ಮರ್ಸ್ ಆಗ್ರೋ ಕಾರನ್ಸ್ ಪ್ರಾಡಕ್ಟ್‌ನಿಂದ ೫೦ ೫೦೦ ಕ್ವಿಂಟಾಲ್ ಮೈಜನ್ನು ೧೬೮ ರಿಂದ ೨೨೩ ರೂಪಾಯಿಯವರೆಗೆ ಕೊಟ್ಟು ಕೊಂಡಿದ್ದೇವೆ. ೫೨೦೦ ಕ್ವಿಂಟಾಲ್ ಜೋಳವನ್ನು ಒಂದು ಕ್ವಿಂಟಾಲ್‌ಗೆ ೧೫೨ ರೂಪಾಯಿಯಿಂದ ೧೯೮ ರೂಪಾಯಿಗಳವರೆಗೆ ಕೊಟ್ಟು ಕೊಂಡಿದ್ದೇವೆ. ಇನ್ನೊಂದು ಸಂಸ್ಥೆಯು ೨೫೦೦ ಕ್ವಿಂಟಾಲ್ ತೊಗರಿಯನ್ನು ಒಂದು ಕ್ವಿಂಟಾಲ್‌ಗೆ ೫೫೦ ರೂಪಾಯಿಯಿಂದ ೫೬೦ ರೂಪಾಯಿಗಳವರೆಗೆ ಕೊಟ್ಟುಕೊಂಡಿದ್ದೇವೆ. ಕಾಟನ್‌ನ್ನು ಸುಮಾರು ಎರಡು ಸಾವಿರ ಕ್ವಿಂಟಾಲ್‌ನಷ್ಟು ಒಂದು ಕ್ವಿಂಟಾಲ್‌ಗೆ ೧೧೦೦ ರೂಪಾಯಿಯಿಂದ ೧೧೨೦ ರೂಪಾಯಿಯವರೆಗೆ ಕೊಟ್ಟು ಕೊಂಡಿದ್ದೇವೆ. ಆಯಿಲ್ ಸೀಡ್ಸ್ ಕೋ-ಆಪರೇಟಿವ್ ಫೆಡರೇಷನ್‌ನವರು ೪೧,೮೦೦ ಸಾವಿರ ಕ್ವಿಂಟಾಲ್ ಗ್ರೌಂಡ್‌ನಟ್ ಅನ್ನು ಒಂದು ಕ್ವಿಂಟಾಲ್ ೪೪೦ ರೂಪಾಯಿಯಿಂದ ೫೫೦ ರೂಪಾಯಿಯವರೆಗೆ ಕೊಟ್ಟು ಕೊಂಡು ಕೊಂಡಿದ್ದಾರೆ. ಆಮೇಲೆ ಸಬ್ ಫ್ಲಪರನ್ನು ೪೧,೩೬೦ ಕ್ವಿಂಟಾಲ್‌ನಷ್ಟು ಒಂದು ಕ್ವಿಂಟಾಲ್‌ಗೆ ೪೫೦ ರೂಪಾಯಿಯಿಂದ ೪೮೫ ರೂಪಾಯಿಯವರೆಗೆ ಕೊಟ್ಟು ಕೊಂಡಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಪಾನ್ಯ ಅಧ್ಯಕ್ಷರೇ, ರಾಗಿ ಬೆಲೆಗೆ ೨೯೨ ರೂಪಾಯಿಯನ್ನು ಬೆಂಬಲ ಬೆಲೆಯನ್ನು ಫಿಕ್ಸ್ ಮಾಡಿದ್ದರೆ ಇವರು ೧೪೦ ರೂಪಾಯಿಗೆ ಕೊಂಡುಕೊಂಡಿದ್ದಾರೆ. ಜೋಳಕ್ಕೆ ೨೨೦ ರೂಪಾಯಿ ಬೆಂಬಲ ಬೆಲೆಯನ್ನು ಫಿಕ್ಸ್ ಮಾಡಿದ್ದರೆ ಇವರು ೧೫೭ ರೂಪಾಯಿಯನ್ನು ಕೊಟ್ಟು ಕೊಂಡಿದ್ದಾರೆ. ಸಮಿತಿಯವರು ಏನು ಬೆಂಬಲ ಬೆಲೆಯನ್ನು ರೆಕಮೆಂಡ್ ಮಾಡಿದ್ದಾರೋ ಆದರಲ್ಲಿ ೫೦ ಪರ್‌ಸೆಂಟ್ ಕೂಡ ಇವರು ಕೊಟ್ಟಿಲ್ಲ. ಇದರಿಂದ ರೈತರುಗಳಿಗೆ ಅನ್ಯಾಯವಾಗುವುದಿಲ್ಲವೆ ? ಬೇರೆ ವಸ್ತುಗಳಿಗೆಲ್ಲಾ ನಿಗದಿಯಾದ ಬೆಲೆ ಇದೆ. ಒಂದು ಬೆಂಕಿ ಪೊಟ್ಟಣಕ್ಕೂ ಬೆಲೆ ಇದೆ. ರೈತರು ಬೆಳೆದ ಬೆಳೆಗೆ ಬೆಲೆ ಏಕೆ ನಿಗದಿ ಮಾಡಬಾರದು ? ಕಬ್ಬಿಗೆ ೧೯೦ ರೂಪಾಯಿ ಬೆಂಬಲ ಬೆಲೆ ಫಿಕ್ಸ್ ಮಾಡಿರುವುದು ೫೦ ಪರ್‌ಸೆಂಟ್ ಕೂಡಾ ಆಗುವುದಿಲ್ಲ. ಈ ಬೆಂಬಲ ಬೆಲೆಯನ್ನು ಸರ್ಕಾರ ಪುನರ್ ಪರಿಶೀಲಿಸಬೇಕು.

ಶ್ರೀ ಬಿ. ರಾಚಯ್ಯ.—ಸಮಿತಿಯವರು ರಾಗಿ ಗೆ ಬೆಂಬಲ ಬೆಲೆಯನ್ನು ಫಿಕ್ಸ್ ಮಾಡಿರುವುದು ೧೪೫ ರೂಪಾಯಿಗಳು. ಫೆಡರೇಷನ್ ಮುಖಾಂತರ ಕೊಂಡುಕೊಂಡಿರುವುದು ೧೪೦

ರೂಪಾಯಿಗಳ ಪ್ರಕಾರ ಕೊಟ್ಟು. ಬೆಳೆಯನ್ನು ಬೆಳೆಯುವುದಕ್ಕೆ ರೈತರು ಏನು ಖರ್ಚು ಮಾಡಿರುತ್ತಾರೋ ಅದಕ್ಕಿಂತ ಹೆಚ್ಚು ಬೆಲೆ ಕೊಟ್ಟು ಕೊಂಡುಕೊಳ್ಳುವುದಕ್ಕಾಗಲಿಲ್ಲ ಎನ್ನುವ ವಿಷಯವನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಆ ರೀತಿ ಒಪ್ಪಿಕೊಂಡರೆ ಏನು ಪ್ರಯೋಜನ ? ನ್ಯಾಯವಾದ ಬೆಲೆ ರೈತರುಗಳಿಗೆ ಸಿಗುವಂತೆ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು.—ಸಾಕು. ನಿಮಗೆ ಮೂರು ಸಾರಿ ಅವಕಾಶ ಕೊಟ್ಟಿದೆ ನೆ. ಇನ್ನು ನೀವು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಈಗ ಮಾನ್ಯ ಸುಮಾ ವಸಂತರವರ ಪ್ರಶ್ನೆ.

ಕಪ್ಪು ಹಲಗೆ ಕಾರ್ಯಕ್ರಮ

೪೨೩. ಶ್ರೀಮತಿ ಸುಮ ವಸಂತ (ವಿರಾಜ ಪೇಟೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕಪ್ಪು ಹಲಗೆ ಕಾರ್ಯಕ್ರಮವನ್ನು ಕೈಗೊಂಡ ಶಾಲೆಗಳೆಷ್ಟು ?

(ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)

ಆ) ಇಲ್ಲಿಯವರೆಗೆ ಇದಕ್ಕೆ ವೆಚ್ಚವಾದ ಹಣ ಎಷ್ಟು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ೨೪೭೩.

(ಅನುಬಂಧ ನೋಡುವುದು).

ಆ) ೨೨೬.೬೪ ಲಕ್ಷ ರೂ.

ಅನುಬಂಧ

೧	ಬೆಂಗಳೂರು ಜಿಲ್ಲೆ	ದೇವನಹಳ್ಳಿ	೧೧೭
೨	ಕೋಲಾರ	ಮಾಲೂರು	೧೭೧
೩	ತುಮಕೂರು	ಪಾವಗಡ	೧೫೫
೪	ಶಿವಮೊಗ್ಗ	ಹೊನ್ನಾಳಿ	೧೦೫
೫	ಚಿತ್ರದುರ್ಗ	ಚಳ್ಳಕೆರೆ	೧೫೪
೬	ಮೈಸೂರು	ಚಾಮರಾಜನಗರ	೧೫೬
೭	ಮಂಡ್ಯ	ಮಳವಳ್ಳಿ	೯೦
೮	ಕೊಡಗು	ಸೋಮವಾರಪೇಟೆ	೭೨
೯	ದಕ್ಷಿಣ ಕನ್ನಡ	ಕುಂದಾಪುರ	೧೪೫
೧೦	ಹಾಸನ	ಹೊಳೇನರಸೀಪುರ	೧೫೨
೧೧	ಚಿಕ್ಕಮಗಳೂರು	ಮೂಡಿಗೆರೆ	೧೧೭
೧೨	ಬೆಳಗಾಂ	ಗೋಕಾಕ್	೧೨೭
೧೩	ಬಿಜಾಪುರ	ಇಂಡಿ	೧೫೧
೧೪	ಧಾರವಾಡ	ಮುಂಡರಗಿ	೩೬
೧೫	ಉತ್ತರ ಕನ್ನಡ	ಸೂಪ	೭೫
೧೬	ಗುಲ್ಬರ್ಗಾ	ಶಹಪೂರ	೧೪೫
೧೭	ರಾಯಚೂರು	ಮಾನ್ವಿ	೧೩೨
೧೮	ಬೀದರ್	ಔರಾದ್	೨೧೪
೧೯	ಬಳ್ಳಾರಿ	ಸಿರಪನಹಳ್ಳಿ	೧೬೧
			೨೪೭೩